ಅಗ್ರಹಾರದ ಮೂಲೆಮನೆಯ ವೆಂಕಮ್ಮ ತಮ್ಮ ಸಂಬಂಧಿಕರೊಬ್ಬರ ಮದುವೆಗೆ ಹೋಗುವ ಗಡಿಬಿಡಿಯಲ್ಲಿದ್ದರು. ಸೊಸೆ ಕನಕಮ್ಮ ಆಗಲೇ ಎದ್ದು ಅಂಗಳವನ್ನು ಗುಡಿಸಿ, ಮೇಲೆ ಚೆನ್ನಾಗಿ ನೀರು ಚಿಮುಕಿಸಿ ಹೆಬ್ಬಾಗಿಲಿನ ಎದುರು ರಂಗೋಲಿಯನ್ನು ಹಾಕಿ ಹೊಸ್ತಿಲು ಬರೆಯುತ್ತಿದ್ದಳು. ಅವಳು ಸಣ್ಣಗೆ ಗುನುಗುತ್ತಿದ್ದ ಹಾಡನ್ನು ಆಲಿಸಿದ ವೆಂಕಮ್ಮ, 'ಪಾಪ ತನ್ನ ಆಸೆಗಳನ್ನೆಲ್ಲ ತನ್ನಲ್ಲೇ ಅಮುಕಿಹಿಡಿದು ಒದ್ದಾಡುತ್ತಿದೆ ಈ ಮಗು. ಇದರ ಭವಿಷ್ಯ ಹೇಗೋ ಏನೋ' ಎಂದುಕೊಂಡು ಮನಸ್ಸಿನಲ್ಲಿಯೇ ಹೇಳಿಕೊಂಡರು.

ಅವರು ಬೆಳಿಗ್ಗೆ ಬೇಗ ಎದ್ದು ನಿತ್ಯಾಹ್ನಿಕಗಳನ್ನೆಲ್ಲಾ ಮುಗಿಸಿ ಬಾವಿಕಟ್ಟೆಯಲ್ಲಿ ಬಾವಿಯಿಂದ ನೀರನ್ನು ಸೇದಿ ಎತ್ತಿ ತಲೆಗೆ ಹೊಯ್ದುಕೊಂಡು, ತಣ್ಣೀರಿನ ಸ್ನಾನ ಮಾಡಿದರು. ಮಡಿಯಲ್ಲಿ ದೇವರ ಮನೆಯನ್ನು ಸೇರಿ ಒಂದು ಗಂಟೆ ಭಕ್ತಿಯಿಂದ ಕುಳಿತು ಹಲವಾರು ಶ್ಲೋಕಗಳನ್ನು, ದೇವರ ನಾಮಗಳನ್ನು ಹೇಳಿದರು. ಬಾಯಿಯಿಂದ ಅದನ್ನು ಸಲೀಸಾಗಿ ಹೇಳುತ್ತಿದ್ದರೂ ಅವರ ಮನಸ್ಸು ಮದುವೆಮನೆಯ ನೆಂಟರು ಇಷ್ಟರನ್ನು ಕಾಣುವ ಆತುರದಿಂದ ತುಂಬಾ ಉಲ್ಲಸಿತವಾಗಿತ್ತು.

ತನಗೆ ವರ್ಷ ಅರವತ್ತಾದರೂ ಬದುಕು ಬೇಡವೆನಿಸಿದ್ದೇ ಇಲ್ಲ. ತನ್ನ ಬದುಕಿಡೀ ಬಡತನದ ಬೇಗೆಯಲ್ಲಿ ಬೆಂದಿದ್ದರೂ ತಾನು ಮರ್ಯಾದೆಯಿಂದ ಬದುಕಿದ್ದೇನೆ ಎಂಬ ತೃಪ್ತಿ ಅವರಲ್ಲಿತ್ತು. ಹಿಂದೆ ಗಂಡ ಅಗ್ರಹಾರದ ಅನಂತಯ್ಯ ಐತಾಳರು ಅವರಿವರ ಮನೆಗೆ ಹೋಗಿ ಪೌರೋಹಿತ್ಯ ಮಾಡಿ ಜೀವನ ನಡೆಸುತ್ತಿದ್ದರು. ಅದರಿಂದ ಆಗುವ ಸಂಪಾದನೆ ಅಷ್ಟಕ್ಕಷ್ಟೆ. ಕಾಯಂ ಆಗಿ ಶ್ರಾದ್ಧಕ್ಕೋ ಮತ್ತೊಂದಕ್ಕೋ ಕರೆಯುವ ಮನೆಯವರು, ಹತ್ತು ವರ್ಷದ ಹಿಂದೆ ಎಷ್ಟು ದಕ್ಷಿಣೆ ಕೊಡುತ್ತಿದ್ದರೋ ಅಷ್ಟನ್ನೇ ದಕ್ಷಿಣೆ ಎಂದು  ಕೊಡುತ್ತಿದ್ದಾಗ, ಅಸಮಾಧಾನವಾಗುತ್ತಿದ್ದರೂ, ಗಟ್ಟಿಯಾಗಿ ಮಾತನಾಡಲೂ ಆಗದ ದಾಕ್ಷಿಣ್ಯ ಸ್ವಭಾವದ ಅನಂತಯ್ಯ, ಮನೆಯಲ್ಲಿ ಊಟಕ್ಕೆ ಕಷ್ಟವಿದ್ದರೂ 'ಇಷ್ಟು ಸಾಕಾಗುವುದಿಲ್ಲ  ಹೆಚ್ಚಿಗೆ ಕೊಡಿ' ಎಂದು ಹೇಳುತ್ತಿರಲಿಲ್ಲ. ಆಚೀಚೆಯ ಪುರೋಹಿತರಿಗೆ ಹೆಚ್ಚು ಹಣ ಕೊಡುತ್ತಿದ್ದರೂ ಅದು ಗೊತ್ತಿದ್ದರೂ ಇವರು 'ಕಾಯಂ ಪುರೋಹಿತರು ದಕ್ಷಿಣೆ ಹೆಚ್ಚು ಮಾಡಿದರೆ ಮುಂದಿನ ವರ್ಷ ಅದಕ್ಕಿಂತ ಹೆಚ್ಚು ಕೊಡಬೇಕಾಗುತ್ತದೆ' ಎಂದು ಲೆಕ್ಕಾಚಾರ ಹಾಕುತ್ತಿದ್ದರು. ಇವರ ಸಣ್ಣ ಬುದ್ಧಿ ಗೊತ್ತಾಗಿ ಕೊನೆಗೆ ಬೇಸರ ಬಂದು ತಾನಿನ್ನು ಪೌರೋಹಿತ್ಯವನ್ನೇ ಮಾಡುವುದಿಲ್ಲ ಎಂದು ನಿರ್ಧರಿಸಿ ಎಲ್ಲ ಮನೆಗಳ ಪೌರೋಹಿತ್ಯಕ್ಕೆ ಕರೆದಾಗ, ಬೇರೆಯವರಿಗೆ ತಿಳಿಸಲು ಹೇಳಿದರು.

ಆದರೆ ಬದುಕಬೇಕಲ್ಲ. ಬ್ಯಾಂಕಿನಲ್ಲಿ ಸಾಲ ಮಾಡಿ ನಾಲ್ಕು ದನಗಳನ್ನು ತಂದು ಸಾಕಿದರು. ದಿನಾ ಅದರ ಹಾಲನ್ನು ಶಂಕರನಾರಾಯಣದ ಹಾಲು ಡೈರಿಗೆ ಕೊಟ್ಟುಬರತೊಡಗಿದರು. ಒಟ್ಟಿನಲ್ಲಿ ತಲೆಗೆ ಎಳೆದರೆ ಕಾಲಿಗೆ ಇಲ್ಲ, ಕಾಲಿಗೆ ಎಳೆದರೆ ತಲೆಗಿಲ್ಲ ಎಂಬ ಪರಿಸ್ಥಿತಿ. ವಯಸ್ಸಿಗೆ ಬಂದ ಮಗನಿಗೆ ಮದುವೆ ಮಾಡಿದರೂ, ಬುದ್ಧಿಮಾಂದ್ಯನಾದ ಅವನು ಸ್ವಲ್ಪ ದಿನದಲ್ಲಿಯೇ ಹೇಳದೇ ಕೇಳದೇ ಮನೆಯನ್ನು ಬಿಟ್ಟು ಹೋದ. ಇದೇ ಚಿಂತೆಯಲ್ಲಿ ಅನಂತಯ್ಯನವರು ಒಂದು ದಿನ ರಾತ್ರಿ ಉಂಡು ಮಲಗಿದವರು ಬೆಳಿಗ್ಗೆ ಏಳುವಾಗ ಹೆಣವಾಗಿದ್ದರು. ಅತ್ತೆ ಸೊಸೆಯರಿಬ್ಬರೇ ಉಳಿದರು. ಏನು ಮಾಡುವುದು? ತಮ್ಮ ಜೀವವನ್ನೇ ಹೋರಾಟಕ್ಕೆ ಒಡ್ಡಿ ಬದುಕುವಂತಾಯಿತು. ಇದೆಲ್ಲ ಅವರ ಮನಃಪಟಲದಲ್ಲಿ ಹಾದುಹೋದ ಅವರ ಎರಡು ಮೂರು ವರ್ಷಗಳಷ್ಟು ಹಿಂದಿನ ಚರಿತ್ರೆ.